# ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥಾನ, ನಾಗಪುರ, ಮಹಾರಾಷ್ಟ್ರ

[ಭಾರತೀಯ ಕೃಷಿ ಅನುಸಂಧಾನ ಪರಿಷದ್ (ಭಾ. ಕೃ. ಅ. ಪ.), ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ]

## ಹತ್ತಿ ಬೆಳೆಯಲು ಸಾಪ್ತಾಹಿಕ ಸಲಹೆ, ಜೂಲೈ 15 ರಿಂದ 21 , 2019 ರವರೆಗೆ

### ಹವಾಮಾನ ಸಲಹೆ

| | ಜೂಲೈ ತಿಂಗಳಿನ ವಾಸ್ತವಿಕ ಮಳೆಯ ಪ್ರಮಾಣ (IMD ಆಧಾರಿತ) | | | | | ಜೂಲೈ ತಿಂಗಳಿನಲ್ಲಿ ಮುನ್ಸೂಚನೆಯ ಮಳೆಯ ಪ್ರಮಾಣ (IMD ಆಧಾರಿತ) | | | | | | ಸಲಹೆ |
|---|---|---|---|---|---|---|---|---|---|---|---|---|
| ದಿನಾಂಕ | 11 | 12 | 13 | 14 | 15 | 16 | 17 | 18 | 19 | 20 | 21 | |
| | ಕರ್ನಾಟಕ | | | | | | | | | | | |
| ಧಾರವಾಡ | | 7 | 1.4 | 1.4 | | 0 | 11 | 13 | 10 | 9 | 0 | ಉತ್ತರ ಕರ್ನಾಟಕದ ಜಿಲ್ಲೆಗಳಾದ ಧಾರವಾಡ, ಹಾವೇರಿ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಗದಗ ಮತ್ತು ಉತ್ತರಕನ್ನಡದ ಬಿಟಿ ಹತ್ತಿ ಬೆಳೆಯುವ ಪ್ರದೇಶಗಳಲ್ಲಿ ಶೇ 90 ರಷ್ಟು ಬಿತ್ತನೆ ಕಾರ್ಯಗಳು ಪೂರ್ಣಗೊಂಡಿವೆ. ಈ ಪ್ರದೇಶಗಳಲ್ಲಿನ ಹತ್ತಿ ಬೆಳೆಯು 11 ರಿಂದ 20 ದಿನಗಳ ಅವಧಿಯದಾಗಿದ್ದು, ಬೆಳೆಯು ಮೊಳಕೆ ಹೊಡೆಯುವ ಹಂತ ಕಳೆದು ಸಸ್ಯಕ ಹಂತದಲ್ಲಿದೆ . ಈ ವಾರದ ವರದಿಯ ಪ್ರಕಾರ ಹತ್ತಿ ಬೆಳೆಯುವ ಎಲ್ಲಾ ಜಿಲ್ಲೆಗಳಲ್ಲಿ ಮೋಡ ಕವಿದ ವಾತಾವರಣವಿದ್ದು ಚಿಮುಕಿಸುವ ಮಳೆ ಆಗುವ ಸಾಧ್ಯತೆ ಇದೆ. ಕೆಲವು ಪ್ರದೇಶಗಳಲ್ಲಿ ಬಿತ್ತನೆ ಮತ್ತು ರಸಗೊಬ್ಬರಗಳನ್ನು ಹಾಕುವ ಕಾರ್ಯಗಳನ್ನು ಮುಗಿಸಲಾಗಿದೆ. ಹತ್ತಿ ಬೆಳೆಯುವ ಕ್ಷೇತ್ರಗಳಲ್ಲಿ ಏಕದಳ ಕಳೆಗಳ ಪ್ರಾಭಲ್ಯ ಕಂಡುಬಂದ ಕಾರಣ ಅವುಗಳನ್ನು ಪೂರ್ವಭಾವಿ ಕಳೆನಾಶಕಗಳ ಸಿಂಪಡನೆಯಿಂದ ನಿಯಂತ್ರಿಸಲಾಗುತ್ತಿದೆ. ಈ ಕ್ಷೇತ್ರಗಳಲ್ಲಿ ರೆಂಬೆ ಮೂತಿ ಹುಳುವಿನ ಸಮಸ್ಯೆ ಕಂಡುಬಂದಿದ್ದರಿಂದ, ಪ್ರತಿ 20 ಸಾಲು ಬಿಟಿ ಹತ್ತಿಗೆ ಒಂದು ಸಾಲು ಬೆಂಡೆಕಾಯಿ ಬೀಜಗಳನ್ನು ಬಿತ್ತಲಾಗುತ್ತಿದೆ. ಇಲ್ಲಿ ಯಾವುದೇ ಸಸ್ಯರೋಗಗಳ ಸಮಸ್ಯೆ ಕಾಣಿಸಿಕೊಂಡಿಲ್ಲ. |
| ಹಾವೇರಿ | | | | | | 7 | 0 | 12 | 15 | 7 | 0 | |
| ಮೈಸೂರ್ | | 0 | 0 | 4 | | 23 | 138 | 53 | 62 | 301 | 59 | |

| | | | | | | | | | | | | |
|---|---|---|---|---|---|---|---|---|---|---|---|---|
| | | | | | | | | | | | | ರಾಯಚೂರಿನಲ್ಲಿ, ಶೇ 5 ರಷ್ಟು ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯದಿಂದ ಬಿಟಿ ಹತ್ತಿ ಬಿತ್ತನೆ ಮಾಡಲಾಗಿದೆ. ಇನ್ನುಳಿದ ಪ್ರದೇಶಗಳಲ್ಲಿನ ರೈತರು ಬಿತ್ತನೆಗಾಗಿ ಮಳೆ ಬರುವಿಕೆಯನ್ನು ಕಾಯುತ್ತಿದ್ದಾರೆ. ಈ ಅವಧಿಯಲ್ಲಿ ಸಾಮಾನ್ಯವಾಗಿ ಆರ್ದ್ರ ಮತ್ತು ಮೋಡ ಕವಿದ ವಾತಾವರಣವಿತ್ತು . ಮೊದಲು ಬಿತ್ತನೆ ಮಾಡಿದ ಪ್ರದೇಶಗಳಲ್ಲಿ ಕಳೆಗಳು ಕಂಡುಬಂದಿದ್ದು ಅವುಗಳ ನಿಯಂತ್ರಣಕ್ಕಾಗಿ ಒಂದು ಅಂತರ ಕೃಷಿಯನ್ನು ಮಾಡಲಾಗಿದೆ. 25 ದಿನಗಳ ಬೆಳೆಯಲ್ಲಿ ಥ್ರಿಪ್ಸ್ ನುಸಿ ಕಂಡುಬಂದಿದ್ದು, ಪ್ರತಿ 10 ಲೀಟರ್ ನೀರಿನಲ್ಲಿ 2.5 ಗ್ರಾಂ ಥಯಾಮೆಥೊಕ್ಸಮ್ 25 ಡಬ್ಲ್ಯೂ ಜಿ ಸಿಂಪಡಿಸಬೇಕೆಂದು ರೈತರಿಗೆ ಸಲಹೆ ನೀಡಲಾಗಿದೆ.<br>**ಸಲಹೆ:**<br>25 ಕೆಜಿ ಯೂರಿಯಾ ಮತ್ತು 25 ಕೆಜಿ ಮುರಿಯೇಟ್ ಆಫ್ ಪೊಟ್ಯಾಶ್ ಅನ್ನು ಬೆಳೆಗೆ ಹಾಕುವುದು ಮತ್ತು ಹಸ್ತಚಾಲಿತ ಕಳೆಗಳ ನಿಯಂತ್ರಣವನ್ನು ಶಿಫಾರಸ್ಸು ಮಾಡಲಾಗಿದೆ |

| **ಮಳೆಯ ಮಾಹಿತಿಯ ಮಾದರಿ** | | | | | | ಮಳೆಯ ಮಾಹಿತಿಯ ಮೂಲ |
|---|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | < 5 | 5-20 | 21-50 | 51-80 | > 80 | http://imdagrimet.gov.in |

0. 0 ಮಿ.ಮೀ : ಮಳೆ ಇಲ್ಲ

ಖಾಲಿ ಇರುವ ಕೋಶ : ಮಳೆಯ ಮಾಹಿತಿ ಲಭ್ಯವಿಲ್ಲ

**ಕನ್ನಡ ಅನುವಾದ:**

ಡಾ. ಎನ್. ಚಂದ್ರಶೇಖರ್

ಡಾ. ಸವಿತಾ ಸಂತೋಷ್

(ಕೃಷಿ ವಿಜ್ಞಾನಿಗಳು, ಭಾ. ಕೃ. ಅ. ಪ- ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥಾನ, ನಾಗಪುರ, ಮಹಾರಾಷ್ಟ್ರ)